ದಿನಾಂಕ 08.12.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯ ಪರ ಮಾನ್ಯ ಶ್ರೀ GMV ವಕೀಲರಿಂದಃ

ದಾವಾ ಆಸ್ತಿ ಗ್ರಾಮ ಠಾಣಾ ಆಸ್ತಿಯಾಗಿರುತ್ತದೆ. ದಾವಾ ಆಸ್ತಿಯಲ್ಲಿ ದಾರಿ ಇದ್ದು ಅದು ಬೈಂದೂರು-ವಿರಜಪೇಟೆಗೆ ಹೋಗುವ ದಾರಿ ಆಗಿರುತ್ತದೆ. ಸದರಿ ರಸ್ತೆ 120 ಅಡಿ ಅಗಲ ಇರುತ್ತದೆ. ಈ ಹಿಂದೆ ರಸ್ತೆಯ ಅಗಲ ನನಗೆ ಸರಿಯಾಗಿ ಗೊತ್ತಿವುದಿಲ್ಲ ಆದರೆ 60-70 ಇರಬಹುದು ಎಂದು ನುಡಿಯುತ್ತಾರೆ. ಸದರಿ ರಸ್ತೆಯು ಸ .ನಂ.1 ಮತ್ತು 10 ರ ನಡುವೆ ಹಾದು ಹೋಗಿರುವ ರಸ್ತೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ದಿಶಾಂಕ್ ಆ್ಯಪ್ ನಲ್ಲಿ ತೆಗೆದಂತಹ ಸ್ಕೆಚ್ಚನ್ನು ನೋಡಿ ಗುರುತಿಸಿದ್ದು ಸದರಿ ಸ್ಕೆಚ್ ಪ್ರಕಾರ ರಸ್ತೆಯು ಸ.ನಂ.1 ಮತ್ತು 10 ರ ನಡುವೆ ಹಾದು ಹೋಗಿರುವ ರಸ್ತೆ ಆಗಿದ್ದು ಎಂದು ಒಪ್ಪಿದ್ದರಿಂದ ಸದರಿ ದಾಖಲೆಯನ್ನು ನಿಪಿ-14 ಎಂದು ಸಂಬಂಧಪಟ್ಟ ಭಾಗವನ್ನು ನಿಪಿ-14 ಎ ಎಂದು ಗುರುತಿಸಲಾಯಿತು. ಸದರಿ ನಿಪಿ-14 ರಲ್ಲಿ ಬೈಂದೂರುಗೆ ಹೋಗುವ ರಸ್ತೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಭಾಗವನ್ನು ನಿಪಿ-14 ಬಿ ಎಂದು ಗುರುತಿಸಲಾಯಿತು. ಸದರಿ ನಿಪಿ-14 ರಲ್ಲಿ ನೀಲಿ ಬಣ್ಣದಲ್ಲಿ ಗುರುತಿಸಿರುವುದು ತಣ್ಣೀರು ಹಳ್ಳ ಎಂದು ಸಾಕ್ಷಿ ಒಪ್ಪಿದ್ದರಿಂದ ಸದರಿ ಭಾಗವನ್ನು ನಿಪಿ-14 ಸಿ ಎಂದು ಗುರುತಿಸಲಾಯಿತು. ಸದರಿ ತಣ್ಣೀರು ಹಳ್ಳ ಭದ್ರಾ ನದಿಗೆ ಹೋಗಿ ಸೇರುತ್ತದೆ ಎಂದರೆ ಸರಿ. ಸದರಿ ನಿಪಿ-14 ರಲ್ಲಿ ಸ.ನಂ.242, 2, 1 ಸ.ನಂ. 10 ರ ಮಧ್ಯದಲ್ಲಿ ಇರುವ ಜಾಗ ಗ್ರಾಮಾ ಠಾಣಾ ಜಾಗ ಎಂದರೆ ಸರಿ. ನಿಪಿ-14 ರಲ್ಲಿ ಬೈಂದೂರು ರಸ್ತೆ ಗ್ರಾಮ ಠಾಣಾ ಜಾಗದವರೆಗೆ ಇರುವುದಿಲ್ಲ ಎಂದರೆ ಸಾಕ್ಷಿ ಸ್ಕೆಚ್ ಹಾಜರು ಪಡಿಸಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-14 ರ ಪ್ರಕಾರ ಬೈಂದೂರು ರಸ್ತೆ ಗ್ರಾಮ ಠಾಣಾ ಜಾಗಕ್ಕೆ ಹೋಗಿರುವುದಿಲ್ಲ ಎಂದರೆ ಸರಿ. ನಿಪಿ-14 ರ ಪ್ರಕಾರ ಗ್ರಾಮ ಠಾಣಾ ಜಾಗದಲ್ಲಿ ಚಿಕ್ಕಮಗಳೂರಿಗೆ ಹೋಗುವ ರಸ್ತೆ ಇದೆ ಎಂದರೆ ಸರಿ. ನಿಪಿ-7 ಮತ್ತು 8 ರಲ್ಲಿ ತೋರಿಸಿರುವ ರಸ್ತೆ ಮಾಗುಂಡಿಗೆ ಹೋಗುವ ರಸ್ತೆ ಆಗಿದ್ದು ಸದರಿ ಮಾಗುಂಡಿ ರಸ್ತೆಯ ಎಡ್ಜ್ ನಿಂದ ಕಲ್ಲಿನ ತಡೆಗೋಡೆ ತನಕ ಅಗಲೀಕರಣ ಮಾಡಿರುತ್ತಾರೆ ಎಂದರೆ ಸರಿ. ನಿಪಿ-9 ಮತ್ತು 10 ರಲ್ಲಿ ತೋರಿಸಿರುವ ರಸ್ತೆ ಚಿಕ್ಕಮಗಳೂರಿಗೆ ಹೋಗುವ ರಸ್ತೆ ಆಗಿದ್ದು ಸದರಿ ಚಿಕ್ಕಮಗಳೂರು ರಸ್ತೆಯ ಎಡ್ಜ್ ನಿಂದ ಕಲ್ಲಿನ ತಡೆಗೋಡೆ ತನಕ ಅಗಲೀಕರಣ ಮಾಡಿರುತ್ತಾರೆ ಎಂದರೆ ಸರಿ. ಸದರಿ ರಸ್ತೆಗಳ ಇನ್ನೊಂದು ಬದಿಯಿಂದ ರಸ್ತೆಯ ಅಗಲೀಕರಣ ಆಗಿರುವುದಿಲ್ಲ ಎಂದರೆ ಸರಿ. ನಿಪಿ-7 ಮತ್ತು 8 ರಲ್ಲಿ ತೋರಿಸಿರುವ ರಸ್ತೆಯ ಅಗಲೀಕರಣ ಆಗಿದ್ದರಿಂದ ಸದರಿ ನಿಪಿ-7 ಮತ್ತು 8 ರಲ್ಲಿ ತೋರಿಸಿರುವ ವಿದ್ಯುತ್ ಕಂಬಗಳು ಮಧ್ಯಕ್ಕೆ ಬಂದಿರುತ್ತವೆ ಎಂದರೆ ಸರಿ. ಸದರಿ ರಸ್ತೆಯ ಬದಿಯಲ್ಲಿ ವಾಟರ್ ಟ್ಯಾಂಕ್

ಮತ್ತು ಆಟೋ ಸ್ಟ್ಯಾಂಡ್ ಇರುವ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸಾಕ್ಷಿ ನೋಡಿ ಹೇಳುತ್ತೇನೆ ಎನ್ನುತ್ತಾರೆ.

ಸದರಿ ರಸ್ತೆಯು ಅಪಘಾತ ವಲಯ ಎಂದು ಪರಿಗಣಿಸಿ ಅಗಲೀಕರಣ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಸದರಿ ರಸ್ತೆಯು ಅಪಘಾತ ವಲಯ ಎಂದು ತೀರ್ಮಾನ ಆಗಿ ರಸ್ತೆಯ ಅಗಲೀಕರಣ ಮಾಡಲು ಆದೇಶ ಮಾಡಿರುತ್ತಾರೆ ಎಂದರೆ ಸರಿ. ಸದರಿ ರಸ್ತೆಯು ಅಪಘಾತ ವಲಯ ಆಗಿದ್ದರಿಂದ ರಸ್ತೆಯ ಬದಿಗಳಲ್ಲಿ ಯಾವುದೇ ಕಟ್ಟಡಗಳನ್ನು ಕಟ್ಟುವ ಆಗಿಲ್ಲ ಎಂದರೆ ಸರಿ. ನಿಪಿ-7 ರಲ್ಲಿ ತೋರಿಸಿರುವ ತಗ್ಗಿನಲ್ಲಿ ಮಣ್ಣು ತುಂಬಿ ರಸ್ತೆ ಮಾಡಿ ಆಟೋ ಸ್ಟ್ಯಾಂಡ್ ಮಾಡಿರುತ್ತಾರೆ ಎಂದರೆ ಸರಿ. ರಸ್ತೆಯಿಂದ ಕೆಳಗದ್ದೆ 6 ರಿಂದ 7 ಅಡಿ ಆಳದಲ್ಲಿ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯನ್ನು 6 ಅಡಿ ಮಣ್ಣು ಹಾಕಿ ಏರಿಸಿರುತ್ತಾರೆ ಎಂದರೆ ಸರಿ. ಸ.ನಂ.1 ಮತ್ತು 10 ರ ನಡುವೆ ಇರುವ ರಸ್ತೆ 70 ಅಡಿ ಇರಬಹುದು.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ನ.ರಾ. ಪುರ.